ನಾ ನಿನ್ನ ಧ್ಯಾನದೊಳಿರಲು ರಂಗ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 315.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page no. 429.
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page no. 153.
4. **Ref.:** Lyrics mentioned without highlights are as per Ref. 1. The wordings in Ref. 2 are similar to Ref. 1. The wordings in Ref. 3 are slightly different and are given in yellow highlights.
5. **Note:** Singer has followed lyrics as in Ref. 1.

ರಾಗ: ಕಾನಡ ತಾಳ: ರೂಪಕ	ರಾಗ: ಕಾನಡ ತಾಳ: ಅಟ್ಟ
ನಾ ನಿನ್ನ ಧ್ಯಾನದೊಳಿರಲು, ಮಿಕ್ಕ	ನಾ ನಿನ್ನ ಧ್ಯಾನದೊಳಿರಲು, ಇಂಥ
ಹೀನಮಾನವರೇನು ಮಾಡಬಲ್ಲರೋ ರಂಗ || ಪ ||	ಹೀನ ಮಾನವರಿಂದೇನಾಹೋದು ಹರಿಯೆ
ಮಚ್ಚರಿಸುವರೆಲ್ಲ ಕೂಡಿ ಮಾಡುವರೇನು	ಮಚ್ಚರಿಸಿದರೇನ ಮಾಡಲಾಪರೊ ಎನ್ನ
ಅಚ್ಯುತ ನಿನ್ನದೊಂದು ದಯೆಯಿರಲು	ಅಚ್ಯುತ ನಿನ್ನದೊಂದು ದಯವಿರಲು
ವಾತ್ಸಲ್ಯ ಬಿಡದಿರು ನಿನ್ನ ನಂಬಿದೆ ದೇವ	ವಾಚ್ಚಲ ಬಿಡದಿರು ನಿನ್ನ ನಂಬಿದ ಮೇಲೆ
ಕಿಚ್ಚಿಗೆ ಇರುವೆ ಮುತ್ತುವುದೆ ಕೇಳೆಲೋ ರಂಗ || 1 ||	ಕಿಚ್ಚಿಗೆ ಗೊರಲೆ ಮುತ್ತುವುದೆ ಕೇಳೆಲೊ ರಂಗ
ಧೂಳಿಲಿ ಕುದುರೆ ವೈಯಾರದಿ ಕುಣಿಯಲು	ದಾಳಿಯಲಿ ತೇಜಿ ವೈಹಾಳಿಯಲಿ ನಡೆಯಲು
ಧೂಳು ರವಿಯ ಮೇಲೆ ಮುಸುಕುವುದೆ	ಧೂಳು ರವಿಗೆ ತಾನು ಮುಸುಕುವುದೆ
ತಾಳಿದವರಿಗೆ ವಿರುದ್ಧ ಲೋಕದೊಳುಂಟೆ	ತಾಳಿದವರಿಗೆ ವಿರುದ್ಧ ಲೋಕದೊಳುಂಟೆ
ಗಾಳಿಗೆ ಗಿರಿಯು ಅಲ್ಲಾಡಬಲ್ಲುದೆ ರಂಗ || 2 ||	ಗಾಳಿಗೆ ಗಿರಿ ನಡುಗುವುದೆ ಕೇಳೆಲೊ ರಂಗ
ಕನ್ನಡಿಯೊಳಗಿನ ಗಂಟು ಕಂಡು ಕಳ್ಳ	ಕನ್ನಡಿಯೊಳಗಿನ ಗಂಟ ಕಂಡು ಕಳ್ಳ
ಕನ್ನವಿಕ್ಕಲವನ ವಶವಹುದೆ	ಕನ್ನವಿಕ್ಕಲು ವಶವಾಗುವುದೆ
ನಿನ್ನ ನಂಬಲು ಮುದ್ದು ಪುರಂದರ ವಿಠಲ	ನಿನ್ನ ಧ್ಯಾನವ ಮಾಡೆ ಪುರಂದರ ವಿಠಲನೆ
ಚಿನ್ನಕ್ಕೆ ಪುಟವಿಟ್ಟಂತೆ ಅಹುದು ರಂಗ || 3 ||	ಚಿನ್ನಕ್ಕೆ ಪುಟವಿಕ್ಕಿದಂತೆ ಕೇಳೆಲೊ ರಂಗ

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಮಚ್ಚರಿಸುವರೆಲ್ಲ – ನನ್ನಲ್ಲಿ ಅಸೂಯೆಗೊಂಡು ನಾನು ಹಾಳಾಗುವುದನ್ನೇ ಬಯಸುವವರು.

ಕಿಚ್ಚಿಗೆ – ಬೆಂಕಿಗೆ.

ಧಾಳಿಲಿ – ದಾಳಿ, ಯುದ್ಧದಲ್ಲಿ.

ವೈಹಾಳಿ = (ತತ್ಸಮ: ವಾಹ್ಯಾಲಿ) ಕುದುರೆಗಳ ಪಂದ್ಯ

Classification: Keerthane
Ankita: purandara vittala
Location: NA
Category: Navaratna Malike, Bhakti, Aartha Bhava.
Sub-Category: dhyAna, nara, ranga, achyuta, daya, deva, kudure, loka, parvata, kannadi, kalla, bangara,
Pravachana: NA
Explanation: NA